


ನೆಟ್ಟಣಿಗೆ ರೈಸ್ ಬ್ರಾಂಡ್ ಉದ್ಘಾಟಿಸಿದ ಸದಸ್ಯರು

ಗಣಪತಿ ಭಟ್ ಕುಂಜತ್ತೋಡಿ ಮುಂತಾದವರು ಈ ಹೊಸ ಬ್ರಾಂಡ್ ರೂಪಿಸುವ ಪ್ರಸ್ತಾವನೆಯನ್ನು ಇಟ್ಟವರು. ಊರಿನಲ್ಲಿರುವ ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಮಂದಿ ಕೃಷಿಕರು ಈ 'ಕೃಷಿ ಬಳಗ'ದ ಬಗ್ಗೆ ಆಸಕ್ತಿ ಹೊಂದಿದ್ದಾರೆ. ಭತ್ತಕ್ಕೆ ಉತ್ತಮ ಬೆಲೆ ಇಲ್ಲದ ಈ ಸಂದರ್ಭದಲ್ಲಿ ಅಕ್ಕಿಯನ್ನು ಮಾಡಿ ಮಾರಾಟ ಮಾಡುವುದೇ ಉತ್ತಮ ಎಂಬುದು ರೈತರ ಅನಿಸಿಕೆ. ಕಳೆದ 20 ವರ್ಷಗಳಿಂದ ಸಾವಯವ ಪದ್ಧತಿಯಲ್ಲಿ ಭತ್ತದ ಕೃಷಿಯನ್ನೇ ಮಾಡುತ್ತ ಬಂದಿರುವ ಗಣಪತಿ ಭಟ್ ಅವರ ಪ್ರಕಾರ, 'ಆಹಾರ ಬೆಳೆಗಳಿಗೆ ಆರ್ಥಿಕವಾಗಿ ಬೆಲೆ ಇಲ್ಲ ಎಂದ ತಕ್ಷಣ ಅದರ ಮೌಲ್ಯವು ಕಡಿಮೆ ಆಗುವುದಿಲ್ಲ. ಆದ್ದರಿಂದ ಪಾರಂಪರಿಕವಾದ ಕೃಷಿ ಪದ್ಧತಿಯನ್ನು ರೈತರು ಕೈಬಿಡಲೇಬಾರದು. ಒಂದಲ್ಲ ಒಂದು ದಿನ ಆಹಾರವು ಜನರಿಗೆ ಬೇಕಾಗುತ್ತದೆ. ಆಗ ಹೊಸದಾಗಿ ವ್ಯವಸ್ಥೆಯನ್ನು ರೂಪಿಸಲಾಗುತ್ತದೆಯೇ? ಕೃಷಿಕರು ಪಾರಂಪರಿಕ ಜ್ಞಾನವನ್ನು ಜವಾಬ್ದಾರಿಯಿಂದ ಕಾಪಿಟ್ಟುಕೊಳ್ಳಬೇಕು'.

'ನಾವು ಭತ್ತದ ಬೀಜವನ್ನು ಕೂಡ ಕಾಪಾಡಿಕೊಂಡು ಬರುತ್ತಿದ್ದೇವೆ. ಕೃಷಿ ಭವನದಲ್ಲಿ ಕೊಡುವ ಸಂಸ್ಕರಿಸಿದ ಭತ್ತದ ಬೀಜವನ್ನು ಬಳಸುವುದಿಲ್ಲ. ಸಾವಯವ ಕೃಷಿ ಎಂಬ ಹೆಸರು ಇತ್ತೀಚೆಗೆ ಬಂದಿರಬಹುದು. ನಮ್ಮ ಹಿರಿಯರು ಮಾಡುತ್ತಿದ್ದ ಕೃಷಿ ಪದ್ಧತಿ ಸಹಜವಾಗಿಯೇ ಸಾವಯವ ರೀತಿಯಲ್ಲಿಯೇ ಇತ್ತು' ಎಂದು ಹೇಳುತ್ತಾರೆ. ನೆಟ್ಟಣಿಗೆ ಬ್ರಾಂಡ್‌ನಡಿಯಲ್ಲಿ



ಶೈಲಜಾ ಮತ್ತು ಗಣಪತಿ ಭಟ್ ದಂಪತಿ

ಸ್ಥಳೀಯರು ಬೆಳೆದ ಅಕ್ಕಿಯನ್ನು ಮಾರಾಟ ಮಾಡುವ ವ್ಯವಸ್ಥೆ ರೂಪಿಸಿರುವುದು ನಿಜಕ್ಕೂ ಶ್ಲಾಘನೀಯ ಎನ್ನುತ್ತಾರೆ ಗಣಪತಿ ಭಟ್.

'ರೈತರು ಯಾವಾಗ ಒಗ್ಗಟ್ಟಾಗಿ ಇರುತ್ತಾರೆ, ಪರಸ್ಪರರಿಗೆ ಆಸರೆಯಾಗಿ ಇರುತ್ತಾರೋ, ಆಗ ಸರ್ಕಾರದಿಂದ ಸವಲತ್ತುಗಳನ್ನು ಪಡೆಯುವುದು, ಅಥವಾ ರೈತಪರವಾದ ಯೋಜನೆಗಳನ್ನು ಜಾರಿ ಮಾಡುವಂತೆ ಆಗ್ರಹಿಸುವುದು ಸುಲಭವಾಗುತ್ತದೆ. ಉದಾಹರಣೆಗೆ 'ನೆಟ್ಟಣಿಗೆ ರೈಸ್ ಬ್ರಾಂಡ್' ಎಂಬ ಹೆಸರಿನಲ್ಲಿ ನಮ್ಮೂರಿನಲ್ಲಿ ಬೆಳೆದ ಭತ್ತಕ್ಕೆ ಮಾರುಕಟ್ಟೆಯನ್ನು ಕಂಡುಕೊಳ್ಳಬೇಕಾದರೆ, ಭತ್ತವನ್ನು ಅಕ್ಕಿಯನ್ನಾಗಿ ಮಾಡುವ ವ್ಯವಸ್ಥೆಯು ಸುಲಭವಾಗಿ ಕೈಗೆಟಕುವಂತೆ ಕಲ್ಪಿಸಿದರೆ ಅನುಕೂಲವಾದೀತು. ಇಂತಹ ವ್ಯವಸ್ಥೆ ಇಲ್ಲದೇ ಇದ್ದಾಗ ನಮ್ಮ ಮನೆಯಲ್ಲಿ ಬೆಳೆದ ಭತ್ತವನ್ನು ಕೊಯ್ಲು ಮಾಡಿ ಒಕ್ಕಲು ಮಾಡಿ ಮೂಟೆಗಳನ್ನು ವಾಹನಗಳಲ್ಲಿ ತುಂಬಿಕೊಂಡು ಮಿಲ್ ಇರುವ ಊರಿಗೆ ಕೊಂಡೊಯ್ಯಬೇಕು. ಅಲ್ಲಿಂದ ಮತ್ತೆ ಅಕ್ಕಿಯನ್ನು ಅಂಗಡಿಗೆ ಸಾಗಾಣಿಕೆ ಮಾಡಬೇಕು. ಇದೆಲ್ಲ ಖರ್ಚಿನ ಬಾಬತ್ತು. ಆದ್ದರಿಂದ ಸ್ಥಳೀಯವಾಗಿ ಚಿಕ್ಕಪುಟ್ಟ ಪ್ರಮಾಣದಲ್ಲಿ ಭತ್ತವನ್ನು ಅಕ್ಕಿಯನ್ನಾಗಿ ಮಾಡಲು ಮಿಲ್‌ಗಳು ಇದ್ದರೆ ಒಳಿತಲ್ಲವೇ? ಅಷ್ಟೇ ಅಲ್ಲ, ನೆಟ್ಟಣಿಗೆ ಬ್ರಾಂಡ್ ಸೂಚಿಸುವ ಚೀಲಗಳು, ಪ್ಯಾಕಿಂಗ್‌ಗೆ ಬೇಕಾದ ಮೆಷಿನ್‌ಗಳು ಮತ್ತು ಮಾರಾಟಕ್ಕೆ ನಿಗದಿಯಾದ ಅಕ್ಕಿಯನ್ನು ದಾಸ್ತಾನು ಮಾಡಲು ದಾಸ್ತಾನು ಕೋಣೆಗಳನ್ನು ಸರ್ಕಾರ ಒದಗಿಸಬೇಕಾಗಿದೆ. ಇದಕ್ಕೆ ಪೂರಕವಾಗಿ ಚರ್ಚೆಗಳು ನಡೆದು, ಸೂಕ್ತ ಯೋಜನೆಯೊಂದನ್ನು ರೂಪಿಸುವಂತೆ ಕೃಷಿ ಅಧಿಕಾರಿಗಳಿಗೆ ಮನವಿ ಮಾಡಿಕೊಂಡಿದ್ದೇವೆ. ಈ ವರ್ಷ ಮಳೆಗಾಲದಲ್ಲಿ ಬೆಳೆಯುವ ಬೆಳೆಗೆ ಬಿತ್ತನೆ ಮಾಡುವಷ್ಟರಲ್ಲಿ ಈ ಎಲ್ಲ ವಿಚಾರಗಳನ್ನು ಚರ್ಚಿಸಿ ನಿರ್ಧಾರಗಳನ್ನು ಮಾಡಬೇಕಾಗಿದೆ' ಎಂದು ರಾಜಗೋಪಾಲ್ ವಿವರಿಸುತ್ತಾರೆ.

ನೆಟ್ಟಣಿಗೆ ರೈಸ್ ಕೊಯ್ಲಾಗಿ ಮಾರುಕಟ್ಟೆಯನ್ನು ಪ್ರವೇಶಿಸಿದ ಸಂದರ್ಭದಲ್ಲಿ, ಅಂದರೆ ಇದೇ ಮಾರ್ಚ್ 18ರಂದು ಬೆಳ್ಳೂರು ಕೃಷಿ ಭವನದ ಆಶ್ರಯದಲ್ಲಿ ನೆಟ್ಟಣಿಗೆ ರೈಸ್ ಬ್ರಾಂಡ್ ಬಿಡುಗಡೆ ಮಾಡಲಾಯಿತು. ಭತ್ತದ ತಳಿ ಸಂರಕ್ಷಣೆಗಾಗಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಸತ್ಯನಾರಾಯಣ ಬೆಳೇರಿ ಅವರು ಈ ನೆಟ್ಟಣಿಗೆ ರೈಸ್ ಬ್ರಾಂಡ್ ಬಿಡುಗಡೆ ಮಾಡಿದರು. ಇದೀಗ ಹೊಸ ಬೆಳೆಗೆ ಬಿತ್ತನೆ ತಯಾರಿಗಳು ನಡೆಯುತ್ತಿವೆ. ಅದಕ್ಕೂ ಮುನ್ನ ನೆಟ್ಟಣಿಗೆ ರೈಸ್ ಬ್ರಾಂಡ್ ಅನ್ನು ಇನ್ನಷ್ಟು ಸಮರ್ಥವಾಗಿ ಮುಂದಕ್ಕೆ ಕೊಂಡೊಯ್ಯುವ ಬಗ್ಗೆ ಚರ್ಚೆ ನಡೆಸಲು ಬೆಳ್ಳೂರು ಕೃಷಿ ಭವನದ ಅಧಿಕಾರಿ ಅದ್ವೈತ್ ಎಂ.ವಿ. ಅವರು ಸಭೆಯೊಂದನ್ನು ಆಯೋಜಿಸಲು ನಿರ್ಧರಿಸಿದ್ದಾರೆ. ತಮ್ಮ ಬೇಡಿಕೆಗಳನ್ನು ಮಂಡಿಸಿ ಸರ್ಕಾರದಿಂದ ಸೌಕರ್ಯಗಳನ್ನು ಪಡೆದು ಕೃಷಿ ಮುಂದುವರೆಸುವ ಉತ್ಸಾಹದಲ್ಲಿದ್ದಾರೆ ಕೃಷಿಕರು.

> ಬೆಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಉತ್ಸಾಹೀ ಪ್ರಗತಿಪರ ಕೃಷಿಕರು ನೆಟ್ಟಣಿಗೆ ಬ್ರಾಂಡ್‌ನ ಅಕ್ಕಿಯನ್ನು ಸಿದ್ಧಪಡಿಸಿ ಮಾರಾಟ ಮಾಡಲು ಮುಂದಾದಾಗ, ಬೆಳ್ಳೂರು ಗ್ರಾಮ ಪಂಚಾಯಿತಿಯ ಬೆಳ್ಳೂರು ಭವನವು ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ನೆಟ್ಟಣಿಗೆ ರೈಸ್ ಕರಾವಳಿ ಪ್ರದೇಶದಲ್ಲಿ ಮಾತ್ರವಲ್ಲ, ಬೆಂಗಳೂರು ನಗರದವರೆಗೂ ಮಾರುಕಟ್ಟೆಯನ್ನು ಕಂಡುಕೊಂಡಿರುವುದು ಸಂತೋಷದ ವಿಷಯ.
>
> **-ಅದ್ವೈತ್ ಎಂ.ವಿ.**, ಕೃಷಿ ಅಧಿಕಾರಿ



ಪ್ರತಿಕ್ರಿಯಿಸಿ: feedback@sudha.co.in